**GSTIN : 29AABAK0318H1ZW**

✆ Off : 26613091 / 26607167
42103360 / 26761877
Email : kea@kea.co.in
Web : www.kea.co.in

# KARNATAKA EMPLOYERS' ASSOCIATION

NO.74, 2nd FLOOR, SHANKARA ARCADE, VANIVILAS ROAD, BASAVANAGUDI
BENGALURU - 560 004
Reg. No. TU 507 / 20-3-1962

Date : 07-12-2019

CIRCULAR No.96/2019

To
All Members of the Association

## MINIMUM WAGE NOTIFICATIONS FOR TEXTILE INDUSTRY

1) The Association has informed the members vide circular no. 86/2019 dated 09-11-2019, that the Government of Karnataka has published Notifications dated 31.10.2019 revising the rates of minimum wages in the following four scheduled employments in the Textile Industry.

   i) Garments, Costumes and Tailoring Industry wef 01-04-2019,

   ii) Cloth Dyeing and Printing Industry wef 30-12-2017,

   iii) Textile (Silk) Industry wef 30-12-2017,

   iv) Spinning Mills Industry wef 30-12-2017,

   The above four final notifications for Textile Industry dated 31-10-2019 with revised rates of minimum wages and effective dates as mentioned above, have also been Gazetted on 14.11.2019 and are enclosed herewith.

2) Subsequently, Government of Karnataka has issued amended four Notifications dated 05.12.2019, pertaining to all the 4 Notifications amending the earlier four Notifications dated 31.10.2019 mentioned in para 1) above. The condition pertaining to the increase in Wages (Basic + VDA) by 10% after a period of two years has been deleted. The amended Notifications are also enclosed herewith. The amendment Notifications dated 05.12.2019 must be read together with the earlier Notifications dated 31.10.2019.

3) An error was noticed in the first notification i.e., Garments, Costumes and Tailoring Industry. In Condition No. 1 in page 3 and 4 of the Notification stipulates that VDA payable shall be effective from 01.04.2018 over and

above 7106 CPI points. This is incorrect. The calculation of VDA comes into effect from 1st April 2019 and not 1st April 2018 as printed in the said Notification. KEA has already pointed out the said error to the Authority and an amendment to rectify the error is awaited.

4) The concerned industries may implement the revised rates of minimum wages as per the four Notifications from the respective dates.

**for KARNATAKA EMPLOYERS' ASSOCIATION**

**sd/-**
**(B.C. PRABHAKAR)**
**PRESIDENT**

Now, therefore, in exercise of the powers conferred by Section Sub-Section (1) of Section 21 of Karnataks shops and Commerical Establishments Act. 1961 (Karnataka Act No. 8 of 1962) the Government of Karnataka hereby directs that the provisions of the Payment of Wages Act, 1936 (Central Act IV of 1936) shall be applicable to all the employers and employees in establishments to which the provisions of the Karnataka shops and Commercial Establishments Act, 1961 is applicable.

PR- 447
SC- 50

By Order and in the Name of the Governor of Karnataka
**G.M.SIDDARAJU**
Under Secretary to Government,
Labour Department

## ಕಾರ್ಮಿಕ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (ಅ), ಬೆಂಗಳೂರು, ದಿನಾಂಕ: 31-10-2019.**

ಕರ್ನಾಟಕ ರಾಜ್ಯದಾದ್ಯಂತ ***"ಸ್ಪಿನ್ನಿಂಗ್ ಮಿಲ್ಸ್ ಉದ್ದಿಮೆಗಳಲ್ಲಿ ಉದ್ಯೋಗ"*** ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ **"ಕನಿಷ್ಠ ವೇತನ ದರಗಳ ಕೋಷ್ಟಕ"** ದಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ. ಕನಿಷ್ಠ ವೇತನ ಕಾಯ್ದೆ 1948 (ಕೇಂದ್ರಕಾಯ್ದೆ ಸಂಖ್ಯೆ: XI) ರ ಕಲಂ 3(1)(ಬಿ) ಸಹವಾಚಿತ ಕಲಂ 5(1)(ಎ) ರಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (2) ದಿನಾಂಕ: 22-03-2018 ರನ್ವಯ ರಚಿಸಿದ ತ್ರಿಪಕ್ಷೀಯ ಸಮಿತಿಯನ್ನು ಪರಿಷ್ಕರಿಸಿ, ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017, ದಿನಾಂಕ: 13-08-2018 ರ ಮೂಲಕ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5(1)(ಎ) ಸಹವಾಚಿತ ಕಲಂ 9 ರನ್ವಯ ತ್ರಿಪಕ್ಷೀಯ ಸಮಿತಿಯನ್ನು ಪುನರ್ ರಚಿಸಿರುತ್ತದೆ. ಸದರಿ ಸಮಿತಿಯು ದಿನಾಂಕ: 23-04-2018, ದಿನಾಂಕ: 07-09-2018, ದಿನಾಂಕ: 12-10-2018, ದಿನಾಂಕ: 11-06-2019 ದಿನಾಂಕ: 25-07-2019, ದಿನಾಂಕ: 16-08-2019, ದಿನಾಂಕ: 29-08-2019, ದಿನಾಂಕ: 05-09-2019 ಹಾಗೂ ದಿನಾಂಕ: 20-09-2019 ಗಳಂದು ಸಭೆಗಳನ್ನು ನಡೆಸಿದ್ದು, ಸದರಿ ಸಭೆಗಳಲ್ಲಿ ಈ ಉದ್ದಿಮೆಗೆ ಪರಿಷ್ಕರಿಸಬೇಕಿರುವ ಕನಿಷ್ಠ ವೇತನದ ದರಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಮಿತಿಯು ತನ್ನ ಚರ್ಚೆಗಳು ಹಾಗೂ ಸಲಹೆಗಳುಳ್ಳ ಅಂತಿಮ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುತ್ತದೆ.

***"ಸ್ಪಿನ್ನಿಂಗ್ ಮಿಲ್ಸ್ ಉದ್ದಿಮೆಗಳಲ್ಲಿ ಉದ್ಯೋಗ"*** ಅನುಸೂಚಿತ ಉದ್ದಿಮೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ರಚಿಸಿದ್ದ ತ್ರಿಪಕ್ಷೀಯ ಸಮಿತಿಯು ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಎ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 18621/2018ರಲ್ಲಿ ದಿನಾಂಕ: 29-03-2019 ರಂದು ಹೊರಡಿಸಿರುವ ತೀರ್ಪಿನ ನಿರ್ದೇಶನದನ್ವಯ, ಕರ್ನಾಟಕ ರಾಜ್ಯದಾದ್ಯಂತ ***"ಸ್ಪಿನ್ನಿಂಗ್ ಮಿಲ್ಸ್ ಉದ್ದಿಮೆಗಳಲ್ಲಿ ಉದ್ಯೋಗ"*** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ದಿನಾಂಕ:30-12-2017 ರಿಂದ ಅನ್ವಯವಾಗುವಂತೆ ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂದರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ.**

**ಕನಿಷ್ಠ ವೇತನ ದರಗಳ ಕೋಷ್ಟಕ**

| | "ಸ್ಪಿನ್ನಿಂಗ್ ಮಿಲ್ಸ್ ಉದ್ದಿಮೆಗಳಲ್ಲಿ ಉದ್ಯೋಗ" | | | | |
|---|---|---|---|---|---|
| | ಕೆಲಸದ ವರ್ಗೀಕರಣ | ವಲಯ-1 | | ವಲಯ-2 | |
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| I | ಅತಿ ಕುಶಲ ಕಾರ್ಮಿಕರು<br>ಮೇಸ್ತ್ರಿ ಮತ್ತು ಇತರೆ ಅತಿಕುಶಲ ಕೆಲಸಕ್ಕೆ | 326.58 | 8491.08 | 319.37 | 8303.59 |
| II | ಕುಶಲ ಕಾರ್ಮಿಕರು<br>ಎಲೆಕ್ಟ್ರಿಷಿಯನ್, ಜನರೇಟರ್ ಆಪರೇಟರ್, ಟರ್ನರ್, ವೆಲ್ಡರ್, ಲಫಮ್ ವೈಂಡರ್, ವೈಂಡಿಂಗ್‌ಫಿಟ್ಟರ್, ಕಾರ್ಡಿಂಗ್ ಫಿಟ್ಟರ್, ಪ್ರಿಪರೇಟರಿ ಫಿಟ್ಟರ್, ಫಿಟ್ಟರ್ ಬ್ಲೊ ರೂಂ, ಸ್ಪಿನ್ನಿಂಗ್ ಫಿಟ್ಟರ್, ಫಿಟ್ಟರ್ ರಿಂಗ್ ಫ್ರೇವರ್, ಸ್ಪಂಡಲ್ ಗ್ಯಾಂಗರ್ಸ್, ಶೇಪರ್, ಪ್ರೆಸ್ಸರ್, ಸ್ಟ್ರಿಪ್ಪರ್, ಸ್ಟಿಕ್ಕರ್ಸ್ , ಇತರೆ ಕುಶಲ ಕೆಲಸಕ್ಕೆ | 318.31 | 8276.18 | 315.35 | 8199.02 |

| | | | | | |
|---|---|---|---|---|---|
| III | ಅರೆ ಕುಶಲ ಕಾರ್ಮಿಕರು<br>ಕಾರ್ಡಿಂಗ್ ಅಸಿಸ್ಟೆಂಟ್, ಅಸಿಸ್ಟೆಂಟ್ ಫಿಟ್ಟರ್, ಪ್ರಿಪರೇಟರಿ ಅಸಿಸ್ಟೆಂಟ್ ಫಿಟ್ಟರ್, ಯಾರ್ನ ಕಂಡಿಷನರ್, ಕಾರ್ಡಿಂಗ ವರ್ಕರ್, ಸಿಂಪ್ಲೆಟೆಕ್ಸ್ ಟೆಂಟರ್ಸ್, ಡ್ರಾಯಿಂಗ್ ಟೆಂಟರ್ಸ್, ಆಯಿಲರ್ಸ್, ಸೈಡರ್, ರೀಸಕ್ ವೀಸರ್ಸ್, ಅಸಿಸ್ಟಂಟ್ ಫೀಪರ್ಸ್, ಕಾಯಿಸ್ ಗ್ರೈಂಡರ್ಸ್, ಬಟ್ಲಿಂಗ್ ಫೀಪರ್ಸ್, ಇತರೆ ಅರೆ ಕುಶಲ ಕೆಲಸಕ್ಕೆ | 304.37 | 7913.54 | 302.36 | 7861.42 |
| IV | ಅಕುಶಲ ಕಾರ್ಮಿಕರು<br>ಬೆಲ್ ಬ್ರಷರ್ ಅಟೆಂಡರ್,ವರ್ಕ ಗ್ಯಾಪ್ ಅಟೆಂಡರ್, ಮೋಟಾರ್ ಅಟೆಂಡರ್, ಸ್ಕಚರ್ ಅಟೆಂಡರ್, ಸ್ಪಿನ್ನಿಂಗ್ ಟೇಪರ್ ಸ್ಟೀಚರ್, ಬ್ಲೊ ರೂಂ ಅಟೆಂಡರ್, ಕಾರ್ಡಿಂಗ್ ಅಟೆಂಡರ್, ಕೊಂಬರ್ ಟೆಂಟರ್, ಡೋಪಿಂಗ ಬಾಯ್ಸ್, ಹಾಫ್ ಕ್ಯಾರಿಯರ್, ಮಿಕ್ಸಿಂಗ್ ಅಟೆಂಡರ್ / ಹೆಲ್ಪರ್, ಸ್ಪಿನ್ನಿಂಗ್ ಜಾಬರ್, ರೀಲರ್ಸ್, ಮಿಕ್ಸಿಂಗ್ ಮಜ್ದೂರ್, ಫಿಟ್ಟರ್ ಹೆಲ್ಪರ್: ಮೆಂಟಿನೆನ್ಸ್ ಹೆಲ್ಪರ್, ಬೈಂಡಿಂಗ್ ವರ್ಕರ್, ತೂಕ ಮಾಡುವುದು, ವೇಸ್ಟ್ ಪಿಕ್ಕರ್ಸ್, ಮಜ್ದೂರ್, ಹೆಲ್ಪರ್ ಕಂ ವೈಂಡರ್, ಕ್ಲೀನಿಂಗ್ ಗ್ಯಾಂಗ್ ಇತರೆ ಅಕುಶಲ ಕೆಲಸಕ್ಕೆ | 296.14 | 7699.58 | 294.04 | 7645.11 |

| | ಕಛೇರಿ ಸಿಬ್ಬಂದಿಗಳು | | | | |
|---|---|---|---|---|---|
| | ಹುದ್ದೆಗಳ ವಿವರ | ವಲಯ–1 | | ವಲಯ–2 | |
| I | ಅಕೌಂಟೆಂಟ್, ಕ್ಯಾಷಿಯರ್, ಸ್ಟೆನೋಗ್ರಾಫರ್ ಮತ್ತು ತತ್ಸಮಾನ ಹುದ್ದೆ. | 379.23 | 9859.93 | 372.82 | 9693.43 |
| II | ಗುಮಾಸ್ತ , ಟೈಪಿಸ್ಟ್, ಸ್ಟೋರ್ ಕೀಪರ್ ಮತ್ತು ತತ್ಸಮಾನ ಹುದ್ದೆ. | 323.18 | 8402.72 | 316.89 | 8239.22 |
| III | ವಾಚ್‌ಮನ್, ಆಫೀಸ್ ಬಾಯ್, ಪ್ಯೂನ್, ಅಟೆಂಡರ್, ಮತ್ತು ತತ್ಸಮಾನ ಹುದ್ದೆ. | 306.01 | 7956.37 | 299.73 | 7792.87 |

**ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;**

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗದಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತೀ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತೀ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015 ರ) ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಪ್ರಸ್ತುತ ಗ್ರಾಹಕ ಬೆಲೆ ಸೂಚ್ಯಾಂಕ 6537 ಇದ್ದು, ಫೆಬ್ರವರಿ / ಮಾರ್ಚ್–2016ರ ಮಾಹೆಯಲ್ಲಿ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು 6537 ಅಂಶಗಳ ಪ್ರಕಟಣೆಯ ನಂತರದಲ್ಲಿ ಮುಂದೆ ಪ್ರಕಟಿಸುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತೀ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು (30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತೀ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು (30) ದಿನಗಳು / ಇಪ್ಪತ್ತಾರು (26)**

2. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ-1976 ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

3. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು.

4. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದಲ್ಲಿ ನಾಲ್ಕು ಗಂಟೆ ಅಥವಾ ಅದಕ್ಕೂ ಹೆಚ್ಚು ಅವಧಿಗೆ ಕಾರ್ಮಿಕರು ಕಾರ್ಯನಿರ್ವಹಿಸಿದಲ್ಲಿ, ಒಂದು ದಿನದ ಕನಿಷ್ಠ ವೇತನವನ್ನು ಕಾರ್ಮಿಕರಿಗೆ ಪಾವತಿಸತಕ್ಕದ್ದು. ಒಂದು ದಿನದಲ್ಲಿ ಕಾರ್ಮಿಕರು ನಾಲ್ಕು ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸ ನಿರ್ವಹಿಸಿದಲ್ಲಿ, ಗಂಟೆಗಳ ವೇತನ ದರದ ಆಧಾರದಲ್ಲಿ ದುಡಿಮೆಯ ಅವಧಿಗೆ ಲೆಕ್ಕ ಹಾಕಿ, ಕನಿಷ್ಠ ವೇತನವನ್ನು ಸಂದಾಯ ಮಾಡತಕ್ಕದ್ದು.

5. **ಕನಿಷ್ಠ ವೇತನದ ಪಾವತಿಯ ವಿಧಾನ :** ನಿಗಧಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

6. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ-1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

7. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

8. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ "ಉದ್ಯೋಗದಾತರ ವಂತಿಗೆ" ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

   1. ನೌಕರರ ರಾಜ್ಯ ವಿಮಾ ಕಾಯ್ದೆ-1948
   2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ-1952.

9. **ರಜಾ ದಿನದಲ್ಲಿಯ ದುಡಿಮೆಯ ವೇತನ :** ಕನಿಷ್ಠ ವೇತನ ಕೋಷ್ಟಕದಲ್ಲಿ ತೋರಿಸಿರುವ ವೇತನ ದರಗಳು ಒಂದು ತಿಂಗಳಿನಲ್ಲಿ ಬರುವ ವಾರದ ರಜಾ ದಿನಗಳ ವೇತನವನ್ನು ಒಳಗೊಂಡಿದ್ದು, ಸದರಿ ವಾರದ ರಜೆಯನ್ನು ಉದ್ಯೋಗದಾತರು / ಗುತ್ತಿಗೆದಾರರು ಕಡ್ಡಾಯವಾಗಿ ನೌಕರರಿಗೆ ನೀಡತಕ್ಕದ್ದು. ವಾರದ ರಜಾ ದಿನಗಳಂದು ಕಾರ್ಮಿಕರು ಕೆಲಸವನ್ನು ಮಾಡಿದ್ದಲ್ಲಿ, ದ್ವಿಗುಣ ವೇತನವನ್ನು ಉದ್ಯೋಗದಾತರು / ಗುತ್ತಿಗೆದಾರರು ಕಾರ್ಮಿಕರಿಗೆ ಪಾವತಿಸತಕ್ಕದ್ದು.

   ರಾಷ್ಟ್ರೀಯ ಹಾಗೂ ಹಬ್ಬದ ಸರ್ಕಾರಿ ರಜಾ ದಿನಗಳಂದು ಸದರಿ ಕಾರ್ಮಿಕರು ಕೆಲಸ ನಿರ್ವಹಿಸಿದಲ್ಲಿ, ಉದ್ಯೋಗದಾತರು / ಗುತ್ತಿಗೆದಾರರು ಅವರಿಗೆ ಸದರಿ ದಿನಕ್ಕೆ ಅನ್ವಯಿಸುವ ವೇತನದ ದ್ವಿಗುಣ ವೇತನವನ್ನು ಪಾವತಿಸಕ್ಕದ್ದು, ಅಥವಾ ಆ ಒಂದು ದಿನದ ವೇತನ ಹಾಗೂ ಒಂದು ವೇತನ ಸಹಿತವಾದ ಪರ್ಯಾಯ ರಜೆಯನ್ನು ಯಾವುದಾದರೊಂದು ದಿನ ಕಾರ್ಮಿಕರಿಗೆ ನೀಡತಕ್ಕದ್ದು.

10. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ-1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು

11. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ-1995ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು. .

12. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

13. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

    **ಅ. ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

    **ಆ. ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

    **ಇ. ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

4



ಈ. ಕುಶಲರಲ್ಲದವರು : ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

PR- 448
SC-200

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್. ಶ್ರೀಕಂಠಬಾಬು
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

## ಕಾರ್ಮಿಕ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (ಆ), ಬೆಂಗಳೂರು, ದಿನಾಂಕ: 31-10-2019**

ಕರ್ನಾಟಕ ರಾಜ್ಯದಾದ್ಯಂತ ***"ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ "*** ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ **"ಕನಿಷ್ಠ ವೇತನ ದರಗಳ ಕೋಷ್ಟಕ"** ದಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ. ಕನಿಷ್ಠ ವೇತನ ಕಾಯ್ದೆ 1948 (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1)(ಬಿ) ಸಹವಾಚಿತ ಕಲಂ 5(1)(ಎ) ರಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (2) ದಿನಾಂಕ: 22-03-2018 ರನ್ವಯ ರಚಿಸಿದ ತ್ರಿಪಕ್ಷೀಯ ಸಮಿತಿಯನ್ನು ಪರಿಷ್ಕರಿಸಿ, ಸಂಖ್ಯೆ: ಕಾಇ 21 ಎಲ್ ಎಂ ಡಬ್ಲ್ಯೂ 2017, ದಿನಾಂಕ:13-08-2018ರ ಮೂಲಕ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5(1)(ಎ) ಸಹವಾಚಿತ ಕಲಂ 9 ರನ್ವಯ ಸಮಿತಿಯನ್ನು ರಚಿಸಿರುತ್ತದೆ. ಸದರಿ ಸಮಿತಿಯು ದಿನಾಂಕ: 23-04-2018, ದಿನಾಂಕ: 07-09-2018, ದಿನಾಂಕ: 12-10-2018, ದಿನಾಂಕ: 11-06-2019, ದಿನಾಂಕ: 25-07-2019, ದಿನಾಂಕ: 16-08-2019, ದಿನಾಂಕ: 29-08-2019 ದಿನಾಂಕ: 05-09-2019 ಹಾಗೂ 20-9-2019 ಗಳಂದು ಸಭೆಗಳನ್ನು ನಡೆಸಿದ್ದು, ಸದರಿ ಸಭೆಗಳಲ್ಲಿ ಈ ಉದ್ದಿಮೆಗೆ ಪರಿಷ್ಕರಿಸಬೇಕಿರುವ ಕನಿಷ್ಠ ವೇತನದ ದರಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಮಿತಿಯು ತನ್ನ ಚರ್ಚೆಗಳು ಹಾಗೂ ಸಲಹೆಗಳುಳ್ಳ ಅಂತಿಮ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುತ್ತದೆ.

***"ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ"*** ಅನುಸೂಚಿತ ಉದ್ದಿಮೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ರಚಿಸಿದ್ದ ಸಮಿತಿಯು ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ತನಗೆ ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5(1)(ಎ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 18621/2018 ರಲ್ಲಿ ದಿನಾಂಕ: 29-03-2019 ರಂದು ಹೊರಡಿಸಿರುವ ತೀರ್ಪಿನ ನಿರ್ದೇಶನದನ್ವಯ, ಕರ್ನಾಟಕ ರಾಜ್ಯದಾದ್ಯಂತ ***"ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ"*** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ದಿನಾಂಕ: 01-04-2019 ರಿಂದ ಅನ್ವಯವಾಗುವಂತೆ ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂಧರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ.**

ಕನಿಷ್ಟ ವೇತನ ದರಗಳ ಕೋಷ್ಟಕ

| "ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ" | | | | | | |
|---|---|---|---|---|---|---|
| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | |
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| **ಅತಿ ಕುಶಲ ಕಾರ್ಮಿಕರು**<br>1. ನಕಾಶೆ ಮಾಡುವವ<br>2. ಗುರುತು ಮಾಡುವವ ಹಾಗೂ ಕತ್ತರಿಸುವವ<br>3. ದರ್ಜಿ<br>4. ನಕಾಶೆ ಹಾಗೂ ಕತ್ತರಿಸುವವ ಇತರೆ ಅತಿಕುಶಲ ಕೆಲಸಕ್ಕೆ | **373.79** | **9718.46** | **368.19** | **9572.86** | **362.59** | **9427.26** |

| | | | | | | |
|---|---|---|---|---|---|---|
| **ಕುಶಲ ಕಾರ್ಮಿಕರು**<br>1. ದರ್ಜಿ [1ನೇ ದರ್ಜೆ]<br>2. ಮುಖ್ಯ ಅಡಿಗೆಯವ<br>3. ಡ್ರೈವರ್ [ಚಾಲಕ] ಕತ್ತರಿಸುವ ಯಂತ್ರ ಚಾಲಕ<br>4. ಪರೀಕ್ಷಕರ<br>5. ದರ್ಜಿ ಮೇಸ್ತ್ರಿ<br>6. ಗುರುತು ಮಾಡಿ ಕತ್ತರಿಸುವವ<br>7. ಇತರೆ ಕುಶಲ ಕೆಲಸಕ್ಕೆ | **361.57** | **9400.81** | **356.02** | **9256.51** | **350.47** | **9112.21** |
| **ಅರೆ ಕುಶಲ ಕಾರ್ಮಿಕರು**<br>**1.** ದರ್ಜಿ [2ನೇ ದರ್ಜೆ]<br>**2.** ಖಾಜಾ ಮಿಷನ್ ಚಾಲಕ<br>**3.** ತಡೆ ಚಕ್ರದ ಮಿಷನ್ ಚಾಲಕ [ಓವರ್ ಲಾಕರ್]<br>**4.** ಇಸ್ತ್ರಿ ಮಾಡುವವ<br>**5.** ಅಳತೆ ಪರೀಕ್ಷಿಸುವವ<br>**6.** ಗುಂಡಿ ಖಾಜಾ ಹೊಲಿಯುವವ<br>**7.** ಇತರೆ ಅರೆಕುಶಲ ಕೆಲಸಕ್ಕೆ. | **351.78** | **9146.40** | **346.33** | **9004.70** | **340.88** | **8862.80** |
| **ಅಕುಶಲ ಕಾರ್ಮಿಕರು**<br>1. ಪ್ಯಾಕ್ ಮಾಡುವವ<br>2. ವಿತರಣೆ ಮಾಡುವವ<br>3. ಬಟ್ಟೆ ಹರಡುವವ<br>4. ಟ್ರಿಮ್ ಮಾಡುವವ<br>5. ಸಹಾಯಕ<br>6. ರವಾನಿಸುವವ, 7. ಮಾಲಿ<br>**8.** ಬೋಜನಾಲಯದ ಕೆಲಸಗಾರರು<br>**9.** ಕೂಲಿ, 10. ದರ್ಜಿ–3ನೇ ದರ್ಜೆ<br>11. ವಾಚ್ & ವಾರ್ಡ್<br>ಇತರೆ ಅಕುಶಲ ಕೆಲಸಕ್ಕೆ | **341.97** | **8891.34** | **336.52** | **8749.64** | **331.07** | **8607.94** |

| ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು | | | | | | |
|---|---|---|---|---|---|---|
| ಹುದ್ದೆಗಳ ವಿವರ | ವಲಯ–1 | | ವಲಯ–2 | | ವಲಯ–3 | |
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | **397.88** | **10344.77** | **384.44** | **9995.33** | **372.12** | **9675.01** |
| ಕ್ಯಾಷಿಯರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ಮತ್ತು ತತ್ಸಮಾನ ಹುದ್ದೆ. | **388.77** | **10108.10** | **376.56** | **9790.64** | **364.35** | **9473.18** |
| ಕಿರಿಯ ಗುಮಾಸ್ತ , ಟೈಪಿಸ್ಟ್, ಡಾಟಾ ಎಂಟ್ರೀ ಆಪರೇಟರ್ ಮತ್ತು ತತ್ಸಮಾನ ಹುದ್ದೆ. | **376.32** | **9784.28** | **364.33** | **9472.54** | **352.34** | **9160.80** |
| ವಾಚ್‌ಮನ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ ಸಹಾಯಕ, ಮತ್ತು ತತ್ಸಮಾನ ಹುದ್ದೆ. | **332.72** | **8650.68** | **522.91** | **8395.62** | **314.19** | **8168.90** |

6



| | | | | | | |
|---|---|---|---|---|---|---|
| ಲಾರಿ ಡ್ರೈವರ್<br>ಕಾರ್ ಡ್ರೈವರ್<br>ಜೀಪ್ ಡ್ರೈವರ್ | 377.67 | 9819.50 | 365.46 | 9502.04 | 354.36 | 9213.44 |
| ಲಾರಿ /ಕಾರ್/ ಜೀಪ್ ಕ್ಲೀನರ್ | 332.72 | 8650.67 | 322.91 | 8395.62 | 314.19 | 8163.90 |

**ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;**

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗದಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತೀ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತೀ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2018 ರಿಂದ ಡಿಸೆಂಬರ್ 2018ರ) ಸರಾಸರಿ ಆಧಾರದ ಮೇಲೆ 2018 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಪ್ರಸ್ತುತ ಗ್ರಾಹಕ ಬೆಲೆ ಸೂಚ್ಯಾಂಕ 7106 ಇದ್ದು, ಈ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

| |
|---|
| **ಮಾಸಿಕ ತುಟ್ಟಿಭತ್ಯೆ = ಪ್ರತೀ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು (30) ದಿನಗಳು** |

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

| |
|---|
| **ದಿನದ ತುಟ್ಟಿಭತ್ಯೆ = ಪ್ರತೀ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು / ಇಪ್ಪತ್ತಾರು (26)** |

2. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

3. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು.

4. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದಲ್ಲಿ ನಾಲ್ಕು ಗಂಟೆ ಅಥವಾ ಅದಕ್ಕೂ ಹೆಚ್ಚು ಅವಧಿಗೆ ಕಾರ್ಮಿಕರು ಕಾರ್ಯನಿರ್ವಹಿಸಿದಲ್ಲಿ, ಒಂದು ದಿನದ ಕನಿಷ್ಠ ವೇತನವನ್ನು ಕಾರ್ಮಿಕರಿಗೆ ಪಾವತಿಸತಕ್ಕದ್ದು. ಒಂದು ದಿನದಲ್ಲಿ ಕಾರ್ಮಿಕರು ನಾಲ್ಕು ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸ ನಿರ್ವಹಿಸಿದಲ್ಲಿ, ಗಂಟೆಗಳ ವೇತನ ದರದ ಆಧಾರದಲ್ಲಿ ದುಡಿಮೆಯ ಅವಧಿಗೆ ಲೆಕ್ಕ ಹಾಕಿ, ಕನಿಷ್ಠ ವೇತನವನ್ನು ಸಂದಾಯ ಮಾಡತಕ್ಕದ್ದು.

5. **ಕನಿಷ್ಠ ವೇತನದ ಪಾವತಿಯ ವಿಧಾನ** : ನಿಗದಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

6. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ–1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

7. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ–1970 ಹಾಗೂ ಇತರೆ ಶಾಸನಬದ್ದ ವ್ಯವಸ್ಥೆಗಳನ್ವಯ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

8. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ "ಉದ್ಯೋಗದಾತರ ವಂತಿಗೆ" ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

1. ನೌಕರರ ರಾಜ್ಯ ವಿಮಾ ಕಾಯ್ದೆ–1948
2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ–1952.

9. **ರಜಾ ದಿನದಲ್ಲಿಯ ದುಡಿಮೆಯ ವೇತನ :** ಕನಿಷ್ಠ ವೇತನ ಕೋಷ್ಟಕದಲ್ಲಿ ತೋರಿಸಿರುವ ವೇತನ ದರಗಳು ಒಂದು ತಿಂಗಳಿನಲ್ಲಿ ಬರುವ ವಾರದ ರಜಾ ದಿನಗಳ ವೇತನವನ್ನು ಒಳಗೊಂಡಿದ್ದು, ಸದರಿ ವಾರದ ರಜೆಯನ್ನು ಉದ್ಯೋಗದಾತರು / ಗುತ್ತಿಗೆದಾರರು ಕಡ್ಡಾಯವಾಗಿ ನೌಕರರಿಗೆ ನೀಡತಕ್ಕದ್ದು. ವಾರದ ರಜಾ ದಿನಗಳಂದು ಕಾರ್ಮಿಕರು ಕೆಲಸವನ್ನು ಮಾಡಿದ್ದಲ್ಲಿ, ದ್ವಿಗುಣ ವೇತನವನ್ನು ಉದ್ಯೋಗದಾತರು / ಗುತ್ತಿಗೆದಾರರು ಕಾರ್ಮಿಕರಿಗೆ ಪಾವತಿಸತಕ್ಕದ್ದು.

ರಾಷ್ಟ್ರೀಯ ಹಾಗೂ ಹಬ್ಬದ ಸರ್ಕಾರಿ ರಜಾ ದಿನಗಳಂದು ಸದರಿ ಕಾರ್ಮಿಕರು ಕೆಲಸ ನಿರ್ವಹಿಸಿದಲ್ಲಿ, ಉದ್ಯೋಗದಾತರು / ಗುತ್ತಿಗೆದಾರರು ಅವರಿಗೆ ಸದರಿ ದಿನಕ್ಕೆ ಅನ್ವಯಿಸುವ ವೇತನದ ದ್ವಿಗುಣ ವೇತನವನ್ನು ಪಾವತಿಸತಕ್ಕದ್ದು, ಅಥವಾ ಆ ಒಂದು ದಿನದ ವೇತನ ಹಾಗೂ ಒಂದು ವೇತನ ಸಹಿತವಾದ ಪರ್ಯಾಯ ರಜೆಯನ್ನು ಯಾವುದಾದರೊಂದು ದಿನ ಕಾರ್ಮಿಕರಿಗೆ ನೀಡತಕ್ಕದ್ದು.

10. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ–1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

11. **ದಿವ್ಯಾಂಗ ಕಾರ್ಮಿಕರ ವೇತನ:** ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ–1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

12. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲ ಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

13. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

ಅ. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

ಆ. **ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

ಇ. **ಅರೆ ಕುಶಲ :** ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

ಈ. **ಕುಶಲರಲ್ಲದವರು :** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

PR- 449
SC-200

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಎಲ್.ಎಸ್. ಶ್ರೀಕಂಠಬಾಬು**
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

**ಕಾರ್ಮಿಕ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017 (ಇ), ಬೆಂಗಳೂರು, ದಿನಾಂಕ: 31-10-2019**

ಕರ್ನಾಟಕ ರಾಜ್ಯದಾದ್ಯಂತ **"ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಉದ್ದಿಮೆಗಳಲ್ಲಿ ಉದ್ಯೋಗ"** ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ **"ಕನಿಷ್ಠ ವೇತನ ದರಗಳ ಕೋಷ್ಟಕ"** ದಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ. ಕನಿಷ್ಠ ವೇತನ ಕಾಯ್ದೆ 1948 (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1)(ಬಿ) ಸಹವಾಚಿತ 5(1)(ಎ) ರಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017(2) ದಿನಾಂಕ: 22-03-2018 ರನ್ವಯ ರಚಿಸಿದ ತ್ರಿಪಕ್ಷೀಯ ಸಮಿತಿಯನ್ನು ಪರಿಷ್ಕರಿಸಿ, ಕಾಇ 21 ಎಲ್ಎಂಡಬ್ಲ್ಯೂ 2017, ದಿನಾಂಕ: 13-08-2018 ರ ಮೂಲಕ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5(1)(ಎ) ಸಹವಾಚಿತ ಕಲಂ 9 ರನ್ವಯ ತ್ರಿಪಕ್ಷೀಯ ಸಮಿತಿಯನ್ನು ಪುನರ್ ರಚಿಸಿರುತ್ತದೆ. ಸದರಿ ಸಮಿತಿಯು ದಿನಾಂಕ: 23-04-2018, ದಿನಾಂಕ: 07-09-2018, ದಿನಾಂಕ: 12-10-2018, ದಿನಾಂಕ: 11-06-2019 ದಿನಾಂಕ: 25-07-2019, ದಿನಾಂಕ: 16-08-2019, ದಿನಾಂಕ: 29-08-2019 ದಿನಾಂಕ: 05-09-2019 ಹಾಗೂ ದಿನಾಂಕ: 20-09-2019 ಗಳಂದು ಸಭೆಗಳನ್ನು ನಡೆಸಿದ್ದು, ಸದರಿ ಸಭೆಗಳಲ್ಲಿ ಈ ಉದ್ದಿಮೆಗೆ ಪರಿಷ್ಕರಿಸಬೇಕಿರುವ ಕನಿಷ್ಠ ವೇತನದ ದರಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಮಿತಿಯು ತನ್ನ ಚರ್ಚೆಗಳು ಹಾಗೂ ಸಲಹೆಗಳುಳ್ಳ ಅಂತಿಮ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುತ್ತದೆ.

**"ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಉದ್ದಿಮೆಗಳಲ್ಲಿ ಉದ್ಯೋಗ"** ಅನುಸೂಚಿತ ಉದ್ದಿಮೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ರಚಿಸಿದ್ದ ಸಮಿತಿಯು ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಎ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 18621/2018ರಲ್ಲಿ ದಿನಾಂಕ: 29-03-2019 ರಂದು ಹೊರಡಿಸಿರುವ ತೀರ್ಪಿನ ನಿರ್ದೇಶನದನ್ವಯ, ಕರ್ನಾಟಕ ರಾಜ್ಯದಾದ್ಯಂತ **"ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಉದ್ದಿಮೆಗಳಲ್ಲಿ ಉದ್ಯೋಗ"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ದಿನಾಂಕ: 30-12-2017ರಿಂದ ಅನ್ವಯವಾಗುವಂತೆ ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂಧರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ.**

**ಕನಿಷ್ಟ ವೇತನ ದರಗಳ ಕೋಷ್ಟಕ**

| "ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಉದ್ದಿಮೆಗಳಲ್ಲಿ ಉದ್ಯೋಗ" | | | |
|---|---|---|---|
| | ಕೆಲಸದ ವರ್ಗೀಕರಣ | ವಲಯ-1 | |
| | | ದಿನಕ್ಕೆ | ತಿಂಗಳಿಗೆ |
| I | **ಅತಿ ಕುಶಲ ಕಾರ್ಮಿಕರು**<br>ಡಿಸೈನರ್ / ಪ್ರಿಂಟರ್ಸ್, ಕೆಮಿಕಲ್ಸ್ ಮಿಶ್ರಣ ಮಾಡುವವರು, ನೂಲನ್ನು ಕೆಮಿಕಲ್ಸ್‌ನಲ್ಲಿ ಬೇಯಿಸುವವರು, | 371.04 | 9647.07 |
| II | **ಕುಶಲ ಕಾರ್ಮಿಕರು**<br>ಎಲೆಕ್ಟ್ರೀಷಿಯನ್, ವೈಂಡರ್ / ಫಿಟ್ಟರ್ / ಫೈರ್‌ಮನ್, ಸ್ಪಿನ್ನಿಂಗ್ / ಸ್ಪಿನ್ನಿಂಗ್ ಮೆಂಟೆನನ್ಸ್, ಕಾರ್ಡಿನ್/ ಜೋನ್‌ಕ್ಲೆಯರಿಂಗ್, ನೂಲನ್ನು ಹದ ಮಾಡುವವರು, ಬಟ್ಟೆಗೆ ಬಣ್ಣ ಹಾಕುವವರು, ರೋಟರ್‌ಆಪರೇಟರ್/ ರೋಲ್‌ಕವರರ್ಸ್, ಟ್ರೆಶರ್ಸ್ | 354.40 | 9214.62 |
| III | **ಅರೆ ಕುಶಲ ಕಾರ್ಮಿಕರು**<br>ಪ್ರಿಂಟಿಂಗ್ ಸಹಾಯಕ / ಸಹಾಯಕ ಆಪರೇಟರ್,<br>ನೂಲು ಬಿಡಿಸುವವರು / ಟೇಪ್ ಮ್ಯಾನ್ | 322.95 | 8396.77 |
| IV | **ಅಕುಶಲ ಕಾರ್ಮಿಕರು**<br>ಸ್ಪಿನ್ನಿಂಗ್ ಹೆಲ್ಪರ್ಸ್/ ಪ್ಯಾಕರ್ಸ್, ಮಿಕ್ಸರ್ಸ್/ಫ್ರೆಂಕೂಲೀಸ್ /ಡ್ರೈಯರ್ಸ್, ಸಹಾಯಕರು, ಕ್ಲೀನರ್ಸ್, | 310.96 | 8085.03 |

| | | | |
|---|---|---|---|
| V | ಡ್ರೈವರ್ಸ್<br>ಕಾರ್‌ಡ್ರೈವರ್<br>ಜೀಪ್‌ಡ್ರೈವರ್<br>ಲಘು ವಾಹನ ಚಾಲಕರು | 348.85 | 9070.32 |
| VI | ಕ್ಲೀನರ್ಸ್<br>ಕಾರು / ಲಾರಿ/ ಜೀಪ್ ಕ್ಲೀನರ್ಸ್ | 304.42 | 7914.95 |

**ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;**

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪತೀ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತೀ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015 ರ) ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಪ್ರಸ್ತುತ ಗ್ರಾಹಕ ಬೆಲೆ ಸೂಚ್ಯಂಕ 6537 ಇದ್ದು, ಫೆಬ್ರವರಿ / ಮಾರ್ಚ್–2016 ರ ಮಾಹೆಯಲ್ಲಿ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು 6537 ಅಂಶಗಳ ಪ್ರಕಟಣೆಯ ನಂತರದಲ್ಲಿ ಮುಂದೆ ಪ್ರಕಟಿಸುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

**ಮಾಸಿಕ ತುಟ್ಟಿಭತ್ಯೆ = ಪ್ರತೀ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು (30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

**ದಿನದ ತುಟ್ಟಿಭತ್ಯೆ = ಪ್ರತೀ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ xಮೂವತ್ತು(30) ದಿನಗಳು / ಇಪ್ಪತ್ತಾರು (26)**

2. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

3. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು.

4. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದಲ್ಲಿ ನಾಲ್ಕು ಗಂಟೆ ಅಥವಾ ಅದಕ್ಕೂ ಹೆಚ್ಚು ಅವಧಿಗೆ ಕಾರ್ಮಿಕರು ಕಾರ್ಯನಿರ್ವಹಿಸಿದಲ್ಲಿ, ಒಂದು ದಿನದ ಕನಿಷ್ಠ ವೇತನವನ್ನು ಕಾರ್ಮಿಕರಿಗೆ ಪಾವತಿಸತಕ್ಕದ್ದು. ಒಂದು ದಿನದಲ್ಲಿ ಕಾರ್ಮಿಕರು ನಾಲ್ಕು ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸ ನಿರ್ವಹಿಸಿದಲ್ಲಿ, ಗಂಟೆಗಳ ವೇತನ ದರದ ಆಧಾರದಲ್ಲಿ ದುಡಿಮೆಯ ಅವಧಿಗೆ ಲೆಕ್ಕ ಹಾಕಿ, ಕನಿಷ್ಠ ವೇತನವನ್ನು ಸಂದಾಯ ಮಾಡತಕ್ಕದ್ದು.

5. **ಕನಿಷ್ಠ ವೇತನದ ಪಾವತಿಯ ವಿಧಾನ :** ನಿಗಧಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

6. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ–1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

7. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

10



8. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ "ಉದ್ಯೋಗದಾತರ ವಂತಿಗೆ" ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

1. ನೌಕರರ ರಾಜ್ಯ ವಿಮಾ ಕಾಯ್ದೆ–1948
2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ–1952

9. **ರಜಾ ದಿನದಲ್ಲಿಯ ದುಡಿಮೆಯ ವೇತನ :** ಕನಿಷ್ಠ ವೇತನ ಕೋಷ್ಠಕದಲ್ಲಿ ತೋರಿಸಿರುವ ವೇತನ ದರಗಳು ಒಂದು ತಿಂಗಳಿನಲ್ಲಿ ಬರುವ ವಾರದ ರಜಾ ದಿನಗಳ ವೇತನವನ್ನು ಒಳಗೊಂಡಿದ್ದು, ಸದರಿ ವಾರದ ರಜೆಯನ್ನು ಉದ್ಯೋಗದಾತರು / ಗುತ್ತಿಗೆದಾರರು ಕಡ್ಡಾಯವಾಗಿ ನೌಕರರಿಗೆ ನೀಡತಕ್ಕದ್ದು. ವಾರದ ರಜಾ ದಿನಗಳಂದು ಕಾರ್ಮಿಕರು ಕೆಲಸವನ್ನು ಮಾಡಿದ್ದಲ್ಲಿ, ದ್ವಿಗುಣ ವೇತನವನ್ನು ಉದ್ಯೋಗದಾತರು / ಗುತ್ತಿಗೆದಾರರು ಕಾರ್ಮಿಕರಿಗೆ ಪಾವತಿಸತಕ್ಕದ್ದು.

ರಾಷ್ಟ್ರೀಯ ಹಾಗೂ ಹಬ್ಬದ ಸರ್ಕಾರಿ ರಜಾ ದಿನಗಳಂದು ಸದರಿ ಕಾರ್ಮಿಕರು ಕೆಲಸ ನಿರ್ವಹಿಸಿದಲ್ಲಿ, ಉದ್ಯೋಗದಾತರು / ಗುತ್ತಿಗೆದಾರರು ಅವರಿಗೆ ಸದರಿ ದಿನಕ್ಕೆ ಅನ್ವಯಿಸುವ ವೇತನದ ದ್ವಿಗುಣ ವೇತನವನ್ನು ಪಾವತಿಸಕ್ಕದ್ದು, ಅಥವಾ ಆ ಒಂದು ದಿನದ ವೇತನ ಹಾಗೂ ಒಂದು ವೇತನ ಸಹಿತವಾದ ಪರ್ಯಾಯ ರಜೆಯನ್ನು ಯಾವುದಾದರೊಂದು ದಿನ ಕಾರ್ಮಿಕರಿಗೆ ನೀಡತಕ್ಕದ್ದು.

10. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ–1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

11. ***ದಿವ್ಯಾಂಗ ಕಾರ್ಮಿಕರ ವೇತನ:*** *ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ–1995ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.*

12. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

13. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

ಅ. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

ಆ. **ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

ಇ. **ಅರೆ ಕುಶಲ** :ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಮನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

ಈ. **ಕುಶಲರಲ್ಲದವರು:** ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

**PR- 450**

**SC-200**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎಲ್.ಎಸ್. ಶ್ರೀಕಂಠಬಾಬು**

ಸರ್ಕಾರದ ಉಪ ಕಾರ್ಯದರ್ಶಿ

ಕಾರ್ಮಿಕ ಇಲಾಖೆ.

## ಕಾರ್ಮಿಕ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017 (ಈ), ಬೆಂಗಳೂರು, ದಿನಾಂಕ: 31-10-2019**

ಕರ್ನಾಟಕ ರಾಜ್ಯದಾದ್ಯಂತ **"ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ"** ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ **"ಕನಿಷ್ಠ ವೇತನ ದರಗಳ ಕೋಷ್ಟಕ"**ದಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ. ಕನಿಷ್ಠ ವೇತನ ಕಾಯ್ದೆ 1948 (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1)(ಬಿ) ಸಹವಾಚಿತ 5(1)(ಎ) ರಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017 (2) ದಿನಾಂಕ: 22-03-2018 ರನ್ವಯ ರಚಿಸಿದ ತ್ರಿಪಕ್ಷೀಯ ಸಮಿತಿಯನ್ನು ಪರಿಷ್ಕರಿಸಿ, ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017, ದಿನಾಂಕ: 13-08-2018ರ ಮೂಲಕ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5(1)(ಎ) ಸಹವಾಚಿತ ಕಲಂ 9 ರನ್ವಯ ಸಮಿತಿಯನ್ನು ಪುನರ್ ರಚಿಸಿರುತ್ತದೆ. ಸದರಿ ಸಮಿತಿಯು ದಿನಾಂಕ: 23-04-2018, ದಿನಾಂಕ: 07-09-2018, ದಿನಾಂಕ: 12-10-2018, ದಿನಾಂಕ: 11-06-2019 ದಿನಾಂಕ: 25-07-2019, ದಿನಾಂಕ: 16-08-2019, ದಿನಾಂಕ: 29-08-2019, ದಿನಾಂಕ: 05-09-2019 ಹಾಗೂ ದಿನಾಂಕ: 20-09-2019 ಗಳಂದು ಸಭೆಗಳನ್ನು ನಡೆಸಿದ್ದು, ಸದರಿ ಸಭೆಗಳಲ್ಲಿ ಈ ಉದ್ದಿಮೆಗೆ ಪರಿಷ್ಕರಿಸಬೇಕಿರುವ ಕನಿಷ್ಠ ವೇತನದ ದರಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಮಿತಿಯು ತನ್ನ ಚರ್ಚೆಗಳು ಹಾಗೂ ಸಲಹೆಗಳುಳ್ಳ ಅಂತಿಮ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುತ್ತದೆ.

**"ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ"** ಅನುಸೂಚಿತ ಉದ್ದಿಮೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ರಚಿಸಿದ್ದ ಸಮಿತಿಯು ನೀಡಿರುವ ಸಲಹೆಗಳನ್ನು ಹಾಗೂ ಸಂಬಂಧಿಸಿದ ಇತರೆ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವ ರಾಜ್ಯ ಸರ್ಕಾರವು, ಕನಿಷ್ಠ ವೇತನ ಕಾಯ್ದೆ, 1948ರ ಕಲಂ 3(1)(ಬಿ) ಸಹವಾಚಿತ ಕಲಂ 5 (1)(ಎ) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತತ್ಸಂಬಂಧದ ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 18621/2018 ರಲ್ಲಿ ದಿನಾಂಕ: 29-03-2019 ರಂದು ಹೊರಡಿಸಿರುವ ತೀರ್ಪಿನ ನಿರ್ದೇಶನದನ್ವಯ, ಕರ್ನಾಟಕ ರಾಜ್ಯದಾದ್ಯಂತ **"ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ"** ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಕಾರ್ಮಿಕರಿಗೆ ದಿನಾಂಕ: 30-12-2017ರಿಂದ ಅನ್ವಯವಾಗುವಂತೆ ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ, ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

**ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂಧರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ.**

**ಕನಿಷ್ಟ ವೇತನ ದರಗಳ ಕೋಷ್ಟಕ**

| | | | |
|---|---|---|---|
| | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ | | |
| | ಕೆಲಸದ ವರ್ಗೀಕರಣ | ವಲಯ-1 | |
| | ಗ್ರೂಪ್ 1 ಸಿಲ್ಕ್ ಚರಕ ಮತ್ತು ಸಿಲ್ಕ್ ಫಿಲೇಚರ್ಎಸ್ಟಾಬ್ಲಿಷ್‌ಮೆಂಟ್ | | |
| I | **ಅತಿ ಕುಶಲ ಕಾರ್ಮಿಕರು** | ದಿನಕ್ಕೆ | ತಿಂಗಳಿಗೆ |
| | ಪ್ರೆಸ್ಸರ್ಸ್, ಗ್ಯಾಸ್‌ರ್ಸ್, ಗ್ಯಾಸ್ ಪ್ಲಾಂಟ್ ಅಟೆಂಡರ್, ಇತರೆ ಅತಿಕುಶಲ ಕೆಲಸಕ್ಕೆ | **328.54** | **9856.22** |
| | **ಕುಶಲ ಕಾರ್ಮಿಕರು** | | |
| | ಚರಕ ರೀಲರ್ಸ್/ ರೀಲರ್ಸ್, ಫೈರ್‌ಮ್ಯಾನ್ (ಚಾರ್ಜ್‌ಮನ್) ಟ್ವಿಸ್ಟರ್, ಗಿಲ್ ರೋವಿಂಗ್ ಟೆಂಟರ್ಸ್, ರಿಂಗ್ ಫ್ರೇಂ ಬಾಯ್ಸ್, ಬ್ಯಾಂಡರ್ಸ್ ಗ್ಯಾಸ್ ಪಿನ್ನರ್ಸ್, ಸಾಯ್ಲಿಂಗ್ ಸ್ಪಿನ್ನಿಂಗ್ ಬಾಯ್ಸ್, ಕೊಂಬ್ ಸ್ಪಿನ್ನರ್ಸ್, ಇತರೆ ಕುಶಲ ಕೆಲಸಕ್ಕೆ | **323.27** | **9698.29** |
| | **ಅರೆ ಕುಶಲ ಕಾರ್ಮಿಕರು** | | |
| | ಚರಕ ಟರ್ನರ್ಸ್, ಸ್ಪಿನ್ನರ್ಸ್, ಸಿಲ್ಕ್‌ವೇಸ್ಟ್ ಕ್ಲೀನರ್ಸ್, ಸಿಲ್ಕ್ ಪ್ಯಾಕರ್ಸ್, ಟ್ವಿಸ್ಟರ್ಸ್, ಹ್ಯಾಂಕ್ ಮೇಕರ್ಸ್, ಡ್ರೈಯರ್ಸ್, ವೇಸ್ಟ್ ಪಿಕ್ಕರ್ಸ್, ಆಯಿಲ್ ಫಿಲ್ಲರ್ಸ್ ತೂಕ ಮಾಡುವವರು, ಡ್ರಾಫ್ಟ್ ಪಿಕ್ಕರ್ಸ್ , ಬಂಡ್ಲರಸ್ ಮತ್ತು ಪ್ಯಾಕರ್ಸ್, ಇತರೆ ಅರೆಕುಶಲ ಕೆಲಸಕ್ಕೆ | **306.00** | **9180.19** |
| | ಗ್ರೂಪ್ 2. ಟ್ವಿಸ್ಟಿಂಗ್ ಸೆಕ್ಷನ್ (ಪ್ಯೂರ್ ಸಿಲ್ಕ್ ಅಂಡ್ ಆರ್ಟ್ ಸಿಲ್ಕ್) | | |
| II | **ಕುಶಲ ಕಾರ್ಮಿಕರು** | | |
| | ವಾರ್ಪರ್ಸ್, ಟ್ವಿಸ್ಟಿಂಗ್ ಅಸಿಸ್ಟೆಂಟ್ ಇತರೆ ಕುಶಲ ಕೆಲಸಕ್ಕೆ | **324.44** | **9733.25** |

| | | | |
|---|---|---|---|
| | **ಅರೆ ಕುಶಲ ಕಾರ್ಮಿಕರು**<br>ವೈಂಡರ್ಸ್, ಟ್ವಿಸ್ಟರ್ಸ್, ಡಬ್ಲರ್ಸ್<br>ರೀಲರ್ಸ್ , ಇತರೆ ಅರೆಕುಶಲ ಕೆಲಸಕ್ಕೆ | 306.00 | 9180.19 |
| | **ಅಕುಶಲ ಕಾರ್ಮಿಕರು**<br>ಹೆಲ್ಪರ್ ಇತರೆ ಅಕುಶಲ ಕೆಲಸಕ್ಕೆ | | |
| | **ಗ್ರೂಪ್ 3. ವೀವಿಂಗ್ ಕ್ಯಾಲೆಂಡರಿಂಗ್ ಮತ್ತು ಪ್ರೋಸೆಸಿಂಗ್** | | |
| III | **ಅತಿ ಕುಶಲ ಕಾರ್ಮಿಕರು**<br>ಹೆಡ್ ಡಿಸೈನರ್ ವೀವರ್ಸ್ ಡಾಬಿ ವಿತ್ ಡ್ರಾಪ್ ಬಾಕ್ಸ್<br>ವೀವರ್ಸ್ (ಜೆಕಾರ್ಡ್) ಇತರೆ ಫ್ಯಾನ್ಸಿ ವೀವರ್ಸ್ ಇತರೆ ಅತಿಕುಶಲ ಕೆಲಸಕ್ಕೆ | 387.11 | 11613.50 |
| | **ಕುಶಲ ಕಾರ್ಮಿಕರು**<br>ಹೈಸ್ಪೀಡ್ ವಾರ್ಪರ್ಸ್, ಡಿಸೈನರ್, ನಾಟರ್ಸ್ ಅಥವಾ ಪೀಸರ್ಸ್, ಲೇಸ್ ವಾರ್ಪರ್ಸ್ , ವೀವರ್ಸ್ ಪ್ಲೇನ್ ಕಾರ್ಪಟ್ ವೀವರ್ಸ್ , ಫಿನಿಶರ್ಸ್, ಪ್ರಿಂಟಿಂಗ್ ಮಿಷಿನ್ ಮ್ಯಾನ್, ಫ್ರಂಟ್ ಕ್ಯಾಲಂಡರ್ ಮ್ಯಾನ್, ಎಡಿಟಿಂಗ್ ಮ್ಯಾನ್, ಡೆವೆಲಪಿಂಗ್ ಮ್ಯಾನ್, ಕಾಂಟ್ರಾಸ್ಟ್ ಪಲ್ಲು ಪ್ರಿಪರೇಟರ್ಸ್ ಮತ್ತು ಡೈಯರ್ಸ್ , ಇತರೆ ಕುಶಲ ಕೆಲಸಕ್ಕೆ | 324.44 | 9733.25 |
| | **ಅರೆ ಕುಶಲ ಕಾರ್ಮಿಕರು**<br>ಪರ್ನ್ ವೈಂಡರ್, ವಾರ್ಪ್ ಸಹಾಯಕರು, ಕಾರ್ಡ್ ಪಂಚರ್ಸ್, ಕಾರ್ಡ್ ಲೇಸರ್ಸ್, ಬ್ಯಾಕ್ ಸ್ಟೆಜರ್ಸ್ , ಬಟ್ಟೆ ಪರಿವೀಕ್ಷಕರು, ಹ್ಯಾಂಡ್ ಮತ್ತು ಮಿಷನ್ ಫೋಲ್ಡರ್ , ಬ್ಯಾಕ್ ಕ್ಯಾಲೆಂಡರ್ ಮ್ಯಾನ್, ಹ್ಯಾಂಡ್ ಸೀವರ್ ಸ್ಟಿಚ್ಚರ್ ಮಾರ್ಕರ್, ಬಂಡ್ಲರ್ ಪ್ರಿಂಟರ್, ಹ್ಯಾಂಡ್ ಐರನಿಂಗ್ ಮ್ಯಾನ್, ಮಿಷನ್ ಮ್ಯಾನ್ ಸಹಾಯಕರು, ಸ್ಕೇಪಿಂಗ್ ಮಿಷನ್ ಮ್ಯಾನ್, ವಿಂಚ್ ಮ್ಯಾನ್, ಕಿರ್‌ಮ್ಯಾನ್, ಸ್ಟೆಂಟರ್ ಮಿಷನ್‌ಮ್ಯನ್, ವಾಷಿಂಗ್ ಮ್ಯಾನ್, ಬ್ಲೀಚಿಂಗ್ ಮ್ಯಾನ್, ಹೈಡ್ರೋ ಎಕ್ಸ್‌ಟ್ರಾಕ್ಟರ್ ಮೆಷಿನ್‌ಮ್ಯಾನ್, ಇತರೆ ಅರೆಕುಶಲ ಕೆಲಸಕ್ಕೆ | 306.00 | 9180.19 |
| | **ಗ್ರೂಪ್ 4. ಮೇಂಟೆನೆನ್ಸ್ (ಪವರ್ ಪ್ಲಾಂಟ್ ಅಂಡ್ ವರ್ಕ್‌ಶಾಪ್)** | | |
| IV | **ಅತಿ ಕುಶಲ ಕಾರ್ಮಿಕರು**<br>ಮೇಸ್ತ್ರಿ, ಜಾಬರ್, ಇತರೆ ಅತಿಕುಶಲ ಕೆಲಸಕ್ಕೆ | 332.06 | 9962.06 |
| | **ಕುಶಲ ಕಾರ್ಮಿಕರು**<br>ವೈರ್‌ಮ್ಯಾನ್, ಫಿಟ್ಟರ್,<br>ಬ್ಲಾಕ್‌ಸ್ಮಿತ್, ಟರ್ನರ್, ಶೇಪರ್ಸ್<br>ಪ್ಲಂಬರ್, ಬಾಯ್ಲರ್‌ಅಟೆಂಡರ್<br>ಕಾರ್ಪೆಂಟರ್, ಮೆಕ್ಯಾನಿಕ್<br>ವೆಲ್ಡರ್, ಇಂಜಿನ್‌ಡ್ರೈವರ್<br>ಎಲೆಕ್ಟ್ರೀಷಿಯನ್, ಮೆಕ್ಯಾನಿಕಲ್ ಫೋರ್‌ಮ್ಯಾನ್, ಮೇಸನ್ ಮತ್ತು ಇತರೆ ಕುಶಲ ಕೆಲಸಕ್ಕೆ | 329.10 | 9873.11 |
| | **ಅರೆ ಕುಶಲ ಕಾರ್ಮಿಕರು**<br>ಪಂಪ್ ಮ್ಯಾನ್,ಫೈಯರ್ ಮ್ಯಾನ್, ಆಯಿಲ್‌ಮ್ಯಾನ್, ಕಾಬ್ಲರ್ ಮತ್ತು ಇತರೆ ಅರೆಕುಶಲ ಕೆಲಸಕ್ಕೆ | 317.45 | 9523.54 |
| | **ಗ್ರೂಪ್ 5 ಜನರಲ್ ಅಡ್ಮಿನಿಸ್ಟ್ರೇಷನ್** | | |
| V | **ಕುಶಲ ಕಾರ್ಮಿಕರು**<br>ಮೇಸ್ತ್ರಿ, ಜಾಬರ್, ಟೈಮ್‌ಕೀಪರ್, ಕ್ಯಾಷಿಯರ್, ಅಕೌಂಟೆಂಟ್ ಮತ್ತು ಇತರೆ ಕುಶಲ ಕೆಲಸಕ್ಕೆ | 437.56 | 11376.61 |
| | **ಅರೆಕುಶಲ ಕಾರ್ಮಿಕರು**<br>ವಾಟರ್‌ಮ್ಯಾನ್, ಸ್ಟೋರ್‌ಕೀಪರ್, ಗುಮಾಸ್ತ, ಬೆರಳಚ್ಚುಗಾರ ಮತ್ತು ಇತರೆ ಅರೆಕುಶಲ ಕೆಲಸಕ್ಕೆ | 372.89 | 9695.22 |
| | **ಅಕುಶಲ ಕಾರ್ಮಿಕರು**<br>ಮಜ್ದೂರ್, ಪ್ಯೂನ್, ವಾಚ್‌ಮನ್, ಮಾಲಿ, ಸ್ವೀಪರ್, ಹೆಲ್ಪರ್ ಮತ್ತು ಇತರೆ ಅಕುಶಲ ಕೆಲಸಕ್ಕೆ | 353.08 | 9180.19 |

**ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ.**

1. **ವ್ಯತ್ಯಾಸವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರ ಹಾಗೂ ಪಾವತಿ:** ನಿಗಧಿತ ಕನಿಷ್ಠ ವೇತನಕ್ಕನುಗುಣವಾಗಿ ಪಾವತಿಸಬೇಕಾದ ವ್ಯತ್ಯಸ್ಥವಾಗುವ ತುಟ್ಟಿಭತ್ಯೆಯ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಉದ್ಯೋಗದಾತರು ಮಾಡತಕ್ಕದ್ದು. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪ್ರತೀ ವರ್ಷದ ಏಪ್ರಿಲ್ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಉದ್ಯೋಗದಾತರು ಪ್ರತೀ ವರ್ಷ ಲೆಕ್ಕಾಚಾರ ಮಾಡಿ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು. ಆದುದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2015 ರಿಂದ ಡಿಸೆಂಬರ್ 2015 ರ) ಸರಾಸರಿ ಆಧಾರದ ಮೇಲೆ 2016 ಏಪ್ರಿಲ್ ಒಂದು (1) ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಪ್ರಸ್ತುತ ಗ್ರಾಹಕ ಬೆಲೆ ಸೂಚ್ಯಾಂಕ 6537 ಇದ್ದು, ಫೆಬ್ರವರಿ / ಮಾರ್ಚ್– 2016 ರ ಮಾಹೆಯಲ್ಲಿ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು 6537 ಅಂಶಗಳ ಪ್ರಕಟಣೆಯ ನಂತರದಲ್ಲಿ ಮುಂದೆ ಪ್ರಕಟಿಸುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ಈ ಕೆಳಕಂಡ ವಿಧಾನದನ್ವಯ ಲೆಕ್ಕಾಚಾರ ಮಾಡಿ ತುಟ್ಟಿ ಭತ್ಯೆಯನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:–** ಮಾಸಿಕ ತುಟ್ಟಿಭತ್ಯೆ ಹಾಗೂ ದಿನದ ತುಟ್ಟಿಭತ್ಯೆಯನ್ನು ಕೆಳಕಂಡ ಸೂತ್ರಗಳನ್ವಯ ಕ್ರಮವಾಗಿ ಲೆಕ್ಕಾಚಾರ ಮಾಡತಕ್ಕದ್ದು;

**ಅ) ಮಾಸಿಕ ವೇತನವನ್ನು ಪಡೆಯುವವರು:–** ಮಾಸಿಕ ವೇತನ ಪಡೆಯುವ ಕಾರ್ಮಿಕರಿಗೆ ಈ ಕೆಳಕಂಡ ಸೂತ್ರದನ್ವಯ ತುಟಿಭತ್ಯೆಯನ್ನು ಲೆಕ್ಕ ಮಾಡತಕ್ಕದ್ದು ಹಾಗೂ ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಿ ಪಾವತಿಸತಕ್ಕದ್ದು.

> **ಮಾಸಿಕ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ**
> **ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು (30) ದಿನಗಳು**

**ಆ) ದಿನಗೂಲಿ ವೇತನ ಪಡೆಯುವವರು :–** ದಿನಗೂಲಿ ಪಡೆಯುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ ದರವನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, {ನಾಲ್ಕು (4) ವಾರದ ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ} ಈ ಕೆಳಕಂಡ ಸೂತ್ರದನ್ವಯ ಲೆಕ್ಕ ಮಾಡತಕ್ಕದ್ದು. ಲೆಕ್ಕಾಚಾರ ಮಾಡಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ, ಅದನ್ನು ಸಮೀಪದ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ ಅರ್ಹರಾದ ಕಾರ್ಮಿಕರಿಗೆ ಪಾವತಿಸತಕ್ಕದ್ದು.

> **ದಿನದ ತುಟ್ಟಿಭತ್ಯೆ = ಪ್ರತೀ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ**
> **ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x ಮೂವತ್ತು(30) ದಿನಗಳು / ಇಪ್ಪತ್ತಾರು (26)**

2. **ಮಹಿಳೆಯರಿಗೆ ಸಮಾನ ವೇತನ :** ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರಯರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಮಾನ ವೇತನ ಕಾಯ್ದೆ–1976ರ ಪ್ರಾವಧಾನಗಳನ್ವಯ ಮಹಿಳಾ ಕಾರ್ಮಿಕರಿಗೆ ಸಂದಾಯ ಮಾಡತಕ್ಕದ್ದು.

3. **ಕನಿಷ್ಠ ವೇತನ ಸ್ವೀಕರಿಸುವ ಹಕ್ಕಿನ ರಕ್ಷಣೆ:** ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ ಎಂಟು (8) ಗಂಟೆಗಳ ಕೆಲಸದ ವೇತನವು ಅದೇ ಸ್ವರೂಪದ (ತರಹದ) ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರದಂತೆ ಉದ್ಯೋಗದಾತರು ಕ್ರಮವಹಿಸತಕ್ಕದ್ದು.

4. **ದುಡಿಮೆಯ ಅವಧಿಯ ಪ್ರಮಾಣಕ್ಕನುಗುಣವಾಗಿ ಕನಿಷ್ಠ ವೇತನ:** ಒಂದು ದಿನದಲ್ಲಿ ನಾಲ್ಕು ಗಂಟೆ ಅಥವಾ ಅದಕ್ಕೂ ಹೆಚ್ಚು ಅವಧಿಗೆ ಕಾರ್ಮಿಕರು ಕಾರ್ಯನಿರ್ವಹಿಸಿದಲ್ಲಿ, ಒಂದು ದಿನದ ಕನಿಷ್ಠ ವೇತನವನ್ನು ಕಾರ್ಮಿಕರಿಗೆ ಪಾವತಿಸತಕ್ಕದ್ದು. ಒಂದು ದಿನದಲ್ಲಿ ಕಾರ್ಮಿಕರು ನಾಲ್ಕು ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸ ನಿರ್ವಹಿಸಿದಲ್ಲಿ, ಗಂಟೆಗಳ ವೇತನ ದರದ ಆಧಾರದಲ್ಲಿ ದುಡಿಮೆಯ ಅವಧಿಗೆ ಲೆಕ್ಕ ಹಾಕಿ, ಕನಿಷ್ಠ ವೇತನವನ್ನು ಸಂದಾಯ ಮಾಡತಕ್ಕದ್ದು.

5. **ಕನಿಷ್ಠ ವೇತನದ ಪಾವತಿಯ ವಿಧಾನ :** ನಿಗದಿತ ಕನಿಷ್ಠ ವೇತನದ ಮೂಲವೇತನ ಹಾಗೂ ತುಟ್ಟಿಭತ್ಯೆ ಲೆಕ್ಕಾಚಾರದಲ್ಲಿ ರೂಪಾಯಿಯ ಭಾಗಾಂಶವು ಬಂದ ಪಕ್ಷದಲ್ಲಿ ಅದನ್ನು ಸಮೀಪದ ಹೆಚ್ಚಿನ ರೂಪಾಯಿಗೆ ಉದ್ಯೋಗದಾತರು ಪೂರ್ಣಗೊಳಿಸಿ, ಕಾರ್ಮಿಕರಿಗೆ ಪಾವತಿಸತಕ್ಕದ್ದು.

6. **ಬ್ಯಾಂಕ್ ಖಾತೆಯ ಮೂಲಕ ವೇತನ ಪಾವತಿ:** ವೇತನ ಪಾವತಿ ಕಾಯ್ದೆ–1936ರ ಕಲಂ 6 ರ ಪ್ರಾವಧಾನದ ಅನ್ವಯ ಕಾರ್ಮಿಕರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.

7. **ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳ ಅನ್ವಯಿಸುವಿಕೆ:** ಈ ಅನುಸೂಚಿತ ಉದ್ದಿಮೆಗೆ ಒಳಪಡುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆಯ ಮೂಲಕ ಗುತ್ತಿಗೆ ಕಾರ್ಮಿಕ (ನಿಷೇದ ಮತ್ತು ನಿಯಂತ್ರಣ) ಕಾಯ್ದೆ–1970 ಹಾಗೂ ಇತರೆ ಶಾಸನಬದ್ಧ ವ್ಯವಸ್ಥೆಗಳನ್ವಯ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೂ ಕೂಡಾ ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಉದ್ಯೋಗದಾತರು ಅನ್ವಯಿಸಿ, ಪಾವತಿಯನ್ನು ಮಾಡತಕ್ಕದ್ದು.

8. **ಸಾಮಾಜಿಕ ಭದ್ರತೆಯ ಕಾಯ್ದೆಗಳಡಿಯಲ್ಲಿ ಉದ್ಯೋಗದಾತರ ವಂತಿಗೆಯ ಪಾವತಿ:** ಕನಿಷ್ಠ ವೇತನದ ಮೊತ್ತವು (ಮೂಲ ವೇತನ + ತುಟ್ಟಿಭತ್ಯೆ) ಕರ್ತವ್ಯ ನಿರ್ವಹಿಸಿದ ಕಾರ್ಮಿಕನ ಅರ್ಜಿತ ವೇತನವಾಗಿದ್ದು, ಉದ್ಯೋಗದಾತರು ಈ ಕೆಳಕಂಡ ಕಾಯ್ದೆಗಳಡಿಯಲ್ಲಿ ಪಾವತಿಸಬೇಕಾದ "ಉದ್ಯೋಗದಾತರ ವಂತಿಗೆ" ಯನ್ನು ಕಾರ್ಮಿಕರ ಅರ್ಜಿತ ಕನಿಷ್ಠ ವೇತನದ ಮೊತ್ತದಿಂದ ಕಡಿತಗೊಳಿಸದೆ, ಪ್ರತ್ಯೇಕವಾಗಿ ಉದ್ಯೋಗದಾತರ ಸಂಪನ್ಮೂಲದಿಂದಲೇ ಪಾವತಿ ಮಾಡತಕ್ಕದ್ದು;

   1. ನೌಕರರ ರಾಜ್ಯ ವಿಮಾ ಕಾಯ್ದೆ–1948
   2. ನೌಕರರ ಭವಿಷ್ಯ ನಿಧಿ ಹಾಗೂ ಇತರೆ ಪ್ರಾವಧಾನಗಳ ಕಾಯ್ದೆ–1952

9. **ರಜಾ ದಿನದಲ್ಲಿಯ ದುಡಿಮೆಯ ವೇತನ :** ಕನಿಷ್ಠ ವೇತನ ಕೋಷ್ಟಕದಲ್ಲಿ ತೋರಿಸಿರುವ ವೇತನ ದರಗಳು ಒಂದು ತಿಂಗಳಿನಲ್ಲಿ ಬರುವ ವಾರದ ರಜಾ ದಿನಗಳ ವೇತನವನ್ನು ಒಳಗೊಂಡಿದ್ದು, ಸದರಿ ವಾರದ ರಜೆಯನ್ನು ಉದ್ಯೋಗದಾತರು / ಗುತ್ತಿಗೆದಾರರು ಕಡ್ಡಾಯವಾಗಿ ನೌಕರರಿಗೆ ನೀಡತಕ್ಕದ್ದು. ವಾರದ ರಜಾ ದಿನಗಳಂದು ಕಾರ್ಮಿಕರು ಕೆಲಸವನ್ನು ಮಾಡಿದ್ದಲ್ಲಿ, ದ್ವಿಗುಣ ವೇತನವನ್ನು ಉದ್ಯೋಗದಾತರು / ಗುತ್ತಿಗೆದಾರರು ಕಾರ್ಮಿಕರಿಗೆ ಪಾವತಿಸತಕ್ಕದ್ದು.

ರಾಷ್ಟ್ರೀಯ ಹಾಗೂ ಹಬ್ಬದ ಸರ್ಕಾರಿ ರಜಾ ದಿನಗಳಂದು ಸದರಿ ಕಾರ್ಮಿಕರು ಕೆಲಸ ನಿರ್ವಹಿಸಿದಲ್ಲಿ, ಉದ್ಯೋಗದಾತರು / ಗುತ್ತಿಗೆದಾರರು ಅವರಿಗೆ ಸದರಿ ದಿನಕ್ಕೆ ಅನ್ವಯಿಸುವ ವೇತನದ ದ್ವಿಗುಣ ವೇತನವನ್ನು ಪಾವತಿಸಕ್ಕದ್ದು, ಅಥವಾ ಆ ಒಂದು ದಿನದ ವೇತನ ಹಾಗೂ ಒಂದು ವೇತನ ಸಹಿತವಾದ ಪರ್ಯಾಯ ರಜೆಯನ್ನು ಯಾವುದಾದರೊಂದು ದಿನ ಕಾರ್ಮಿಕರಿಗೆ ನೀಡತಕ್ಕದ್ದು.

10. **ಹೆಚ್ಚುವರಿ ಅವಧಿ ದುಡಿಮೆಯ ವೇತನ:** ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಕಾರ್ಮಿಕರಿಗೆ ಹೆಚ್ಚುವರಿ ಅವಧಿಯ ಕೆಲಸಕ್ಕೆ ಕನಿಷ್ಠ ವೇತನ ಕಾಯ್ದೆ–1948 ರ ಕಲಂ 14 ರನ್ವಯ ವೇತನವನ್ನು ಉದ್ಯೋಗದಾತರು ಪಾವತಿಸತಕ್ಕದ್ದು.

11. ದಿವ್ಯಾಂಗ ಕಾರ್ಮಿಕರ ವೇತನ: ವಿಕಲಚೇತನ ವ್ಯಕ್ತಿಗಳು ಕೆಲಸ ನಿರ್ವಹಿಸುತ್ತಿದ್ದಲ್ಲಿ ಸದರಿ ಕೆಲಸವನ್ನು ನಿರ್ವಹಿಸುತ್ತಿರುವ ಇತರೆ ಸಾಮಾನ್ಯ ಕಾರ್ಮಿಕರು ಪಡೆಯುತ್ತಿರುವ ವೇತನಕ್ಕೆ ಸಮನಾಗಿ ವೇತನವನ್ನು ಪಡೆಯಲು ವಿಕಲಚೇತನ (ದಿವ್ಯಾಂಗ) ಕಾರ್ಮಿಕರು ಅರ್ಹರಾಗಿದ್ದು, ಇದನ್ನು ವಿಕಲಾಂಗ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ಕಾಯ್ದೆ–1995 ರ ಪ್ರಾವಧಾನಗಳ ಹಿನ್ನೆಲೆಯಲ್ಲಿ ಪಾವತಿಸಲು ಉದ್ಯೋಗದಾತರು ಕ್ರಮವಹಿಸತಕ್ಕದ್ದು.

14

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



12. **ಕನಿಷ್ಠ ವೇತನ ಮೊತ್ತದ ಕಡ್ಡಾಯ ಪಾವತಿ:** ಕರ್ತವ್ಯ ನಿರ್ವಹಿಸಿದ ಕಾರ್ಮಿಕರಿಗೆ ಪಾವತಿ ಮಾಡುವ ಒಟ್ಟು ವೇತನವು, ಈ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಮತ್ತು ಕಾಲಕಾಲಕ್ಕೆ ವ್ಯತ್ಯಾಸವಾಗುವ ತುಟ್ಟಿಭತ್ಯೆಯನ್ನು ಸೇರ್ಪಡಿಸಿದಾಗ ಬರುವ ಮೊತ್ತಕ್ಕೆ ಕಡಿಮೆಯಾಗದಂತೆ ವೇತನವನ್ನು ಕಡ್ಡಾಯವಾಗಿ ಉದ್ಯೋಗದಾತರು ಪಾವತಿಸತಕ್ಕದ್ದು.

13. **ಕಾರ್ಮಿಕರ ಕೆಲಸದ ಸ್ವರೂಪಗಳ ವರ್ಗೀಕರಣ:** ಕಾರ್ಮಿಕರು ಉದ್ಯೋಗದಾತರ ಸಂಸ್ಥೆಯಲ್ಲಿ ನಿರ್ವಹಿಸುವ ಕೆಲಸದ ಸ್ವರೂಪವನ್ನು ಅವರ ಕೌಶಲ್ಯಗಳಿಗನುಗುಣವಾಗಿ ನಾಲ್ಕು (04) ವರ್ಗಗಳಲ್ಲಿ ವಿಂಗಡಿಸಿದ್ದು, ಅದರ ಸಾಮಾನ್ಯ ವ್ಯಾಖ್ಯಾನ ಈ ಕೆಳಗಿನಂತಿದೆ;

ಅ. **ಅತಿ ಕುಶಲ:** ಅತಿ ಕುಶಲ ಕೆಲಸಗಾರರು ಎಂದರೆ ಯಾರು ಹೆಚ್ಚಿನ ನೈಪುಣ್ಯತೆ ಕೆಲಸವನ್ನು ಅತಿ ಹೆಚ್ಚು ನಿಖರವಾಗಿ ಮಾಡಬಲ್ಲವರಾಗಿದ್ದು, ನಕ್ಷೆಯನ್ನು ಓದಬಲ್ಲ ಮತ್ತು ಅದರ ಆಧಾರದ ಮೇಲೆ ಕೆಲಸ ಮಾಡಬಲ್ಲವರಾಗಿದ್ದು, ಅವರ ವಿಭಾಗದ 'ಕುಶಲ' ಮತ್ತು ಇತರೇ ಕೆಲಸಗಾರರ ಕೆಲಸವನ್ನು ನಿರ್ದೇಶಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದು, ಆ ವಿಭಾಗದ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಿಸಿಕೊಂಡು ಹೋಗಬಲ್ಲವರಾಗಿರಬೇಕು.

ಆ. **ಕುಶಲ:** ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ. ಅವಶ್ಯ ಬಿದ್ದರೆ ಸರಳವಾದ ನಕ್ಷೆಗಳನ್ನು ಓದಿ, ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

ಇ. **ಅರೆ ಕುಶಲ** : ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರೋಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

ಈ. **ಕುಶಲರಲ್ಲದವರು** : ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿದ್ದು ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

PR- 451 ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

SC-200 ಎಲ್.ಎಸ್. ಶ್ರೀಕಂಠಬಾಬು

ಸರ್ಕಾರದ ಉಪ ಕಾರ್ಯದರ್ಶಿ

ಕಾರ್ಮಿಕ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

Spinning Mills

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017(ಅ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 5-12-2019.

## ತಿದ್ದುಪಡಿ

ಸರ್ಕಾರದ ದಿನಾಂಕ: 31.10.2019ರ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (ಅ)ರ ಅಧಿಸೂಚನೆ ಪುಟ ಸಂಖ್ಯೆ: 2ರ ಕಂಡಿಕೆ-4ರಲ್ಲಿ "ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂದರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ.". ಎಂಬ ಅಂಶಗಳನ್ನು ಕೈಬಿಡಲಾಗಿದೆ.

ಉಳಿದಂತೆ, ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

5/12/2019

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ, ಈ ತಿದ್ದುಪಡಿ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:-

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).

Tailoring Industry.

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017(ಅ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 5-12-2019.

## ತಿದ್ದುಪಡಿ

ಸರ್ಕಾರದ ದಿನಾಂಕ: 31.10.2019ರ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (ಅ) ರ ಅಧಿಸೂಚನೆ ಪುಟ ಸಂಖ್ಯೆ:2ರ ಕಂಡಿಕೆ-4ರಲ್ಲಿ "ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂದರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ." ಎಂಬ ಅಂಶಗಳನ್ನು ಕೈಬಿಡಲಾಗಿದೆ.

ಉಳಿದಂತೆ, ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

5.12.2019

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ, ಈ ತಿದ್ದುಪಡಿ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:-

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).

Cloth Dyeing & Printing

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 5-12-2019.

## ತಿದ್ದುಪಡಿ

ಸರ್ಕಾರದ ದಿನಾಂಕ: 31.10.2019ರ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (ಇ) ರ ಅಧಿಸೂಚನೆ ಪುಟ ಸಂಖ್ಯೆ: 2ರ ಕಂಡಿಕೆ-4ರಲ್ಲಿ "ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂದರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ." ಎಂಬ ಅಂಶಗಳನ್ನು ಕೈಬಿಡಲಾಗಿದೆ.

ಉಳಿದಂತೆ, ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

5.12.2019

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ, ಈ ತಿದ್ದುಪಡಿ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:-

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).

Textile (silk) Industries.

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (ಈ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 5-12-2019.

## ತಿದ್ದುಪಡಿ

ಸರ್ಕಾರದ ದಿನಾಂಕ: 31.10.2019ರ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (ಈ) ರ ಅಧಿಸೂಚನೆ ಪುಟ ಸಂಖ್ಯೆ: 2ರ ಕಂಡಿಕೆ-4ರಲ್ಲಿ "ಈ ಅಧಿಸೂಚನೆ ಮೂಲಕ ಪರಿಷ್ಕರಿಸಲಾದ ಕನಿಷ್ಠ ವೇತನ ದರಗಳು ಮುಂದಿನ 2 ವರ್ಷಗಳ ತನಕ ಜಾರಿಯಲ್ಲಿರುತ್ತವೆ. ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿ ಮುಗಿದ ನಂತರ, ಆ ಸಂದರ್ಭದಲ್ಲಿರುವ ಒಟ್ಟು ಕನಿಷ್ಠ ವೇತನಕ್ಕೆ (ಮೂಲ ವೇತನ + ವ್ಯತ್ಯಸ್ಥ ತುಟ್ಟಿಭತ್ಯೆ) ಶೇ 10 ರಷ್ಟು ವೇತನ ಹೆಚ್ಚಳವನ್ನು ಸೇರಿಸಿ, ಕನಿಷ್ಠ ವೇತನ ದರಗಳನ್ನು ಪಾವತಿಸಲು ಉದ್ಯೋಗಸ್ಥರು ಬಾಧ್ಯಸ್ಥರಾಗಿರುತ್ತಾರೆ." ಎಂಬ ಅಂಶಗಳನ್ನು ಕೈಬಿಡಲಾಗಿದೆ.

ಉಳಿದಂತೆ, ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

5-12-2019

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ, ಈ ತಿದ್ದುಪಡಿ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:-

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).